ದಿಃ 06-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು : ಪ್ರತಿವಾದಿಗಳ ಪರ ಶ್ರೀ. ಐ.ಎನ್.ಎನ್ ವಕೀಲರಿಂದಃ</u>

ನನ್ನ ತಂದೆಯ ಪಾಲಿಗೆ ಬಂದಂತಹ ಬಿ ಷೆಡ್ಯೂಲ್ ಆಸ್ತಿಗಳ ಪೈಕಿ ಕೆಲವು ಆಸ್ತಿಗಳನ್ನು ನನ್ನ ತಂದೆ ಮಾರಾಟ ಮಾಡಿದ್ದು ಉಳಿದ ಆಸ್ತಿಗಳನ್ನು ನಾವುಗಳು ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ದಿನಾಂಕ 01-08-2011 ರಲ್ಲಿ ಸ.ನಂ. 19/1 ರ ಆಸ್ತಿಯನ್ನು ನಾವು ಮಾರಾಟ ಮಾಡಿದ್ದೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಒಂದು ಆಸ್ತಿಯನ್ನು ಮಾತ್ರ ತಾವುಗಳು ಮಾರಾಟ ಮಾಡಿರುವುದಾಗಿ ನುಡಿಯುತ್ತಾರೆ. ಸದರಿ ಆಸ್ತಿಯ ಮಾರಾಟದ ವಿಚಾರವನ್ನು ನನ್ನ ವಾದ ಪತ್ರದಲ್ಲಿ ಬರೆಸಲು ತೊಂದರೆ ಇರಲಿಲ್ಲ. ಖಾನೆಶುಮಾರಿ ನಂ. 703, 706 ಸ.ನಂ. 19 ದ 23/1 ಮತ್ತು ಸ.ನಂ 123 ಹಾಗೂ ಸ.ನಂ. 74/5 ಆಸ್ತಿಗಳ ಪೈಕಿ ಸ.ನಂ 19 ರ ಆಸ್ತಿಯನ್ನ ಮಾತ್ರ ಮಾರಾಟ ಮಾಡಿದ್ದೇವೆ. ಸದರಿ ಆಸ್ತಿಗಳು ನಮ್ಮ ತಂದೆಗೆ ವಿಭಾಗದ ಮುಖಾಂತರ ಬಂದಿದ್ದವು ಎಂದರೆ ಸರಿಯಲ್ಲ. ದಿನಾಂಕ 27-02-1963 ರ ವಿಭಾಗ ಪತ್ರವನ್ನು ಹಾಜರುಪಡಿಸಿರುವ ಬಗ್ಗೆ ನನಗೆ ಗೊತ್ತಿಲ್ಲ.

ಸದರಿ ವಿಭಾಗದಲ್ಲಿ ನನ್ನ ತಂದೆಗೆ 3 ಆಸ್ತಿಗಳು ಬಂದಿದ್ದವು. ದಾವೆ ಹೂಡಲು ನಾನು ಮತ್ತು ನನ್ನ ಅಣ್ಣ ಮಾಹಿತಿ ಕೊಟ್ಟಿದ್ದೇವೆ. 1963 ರಲ್ಲಿ ಆದಂತಹ ವಿಭಾಗದ ಆಧಾರದ ಮೇಲೆ ಅವರವರ ಪಾಲಿಗೆ ಆಸ್ತಿಗೆ ಸಂಬಧಿಸಿದಂತೆ ಖಾತೆಗಳು ಬದಲಾವಣೆ ಆಗಿದ್ದವು ಎಂದರೆ ಸರಿಯಲ್ಲ. ದಾವೆ ಹೂಡುವ ಕಾಲಕ್ಕೆ ನನ್ನ ತಂದೆಯ ಹೆಸರಿನಲ್ಲಿ ಖಾತೆಗಳು ಎರಡೂ ಆಸ್ತಿಗಳಿಗೆ ಸಂಬಂಧಿಸಿದಂತೆ ಬರುತ್ತಿದ್ದವು. ವಿಭಾಗ ಪತ್ರದಂತೆ ನನ್ನ ತಂದೆಯ ಪಾಲಿಗೆ ಬಂದಂತಹ ಆಸ್ತಿಗಳು ಖಾತೆ ಬದಲಾವಣೆಯಾಗದೆ ಇರುವ ವಿಚಾರವಾಗಿ ತಕರಾರನ್ನು ಕೊಟ್ಟಿದ್ದೇವೆ. ನನ್ನ ತಾತ ಮತ್ತು ನನ್ನ ತಂದೆಯ ಸಹೋದರ ಸಹೋದರಿಯರ ಮೇಲೆ ಕಂದಾಯ ನ್ಯಾಯಾಲಯಗಳಲ್ಲಿ ಪ್ರಕರಣ ಹೂಡಿದ್ದೀರ ಎಂದರೆ ಸಾಕ್ಷಿಯು ತನ್ನ ಚಿಕ್ಕಪ್ಪ ತನ್ನ ತಂದೆಗೆ ಬಂದಂತಹ ಪಾಲಿನ ಆಸ್ತಿಗಳಿಗೆ ಸಂಬಂಧಿಸಿದಂತೆ ಖಾತೆ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ವಾದ ಪತ್ರದಲ್ಲಿ ಬರೆಸಲು ಯಾವುದೇ ತೊಂದರೆ ಇರಲಿಲ್ಲ. ಸಾಕ್ಷಿ ಮುಂದುವರೆದು ಬರೆಸಿರುವುದಾಗಿ ನುಡಿಯುತ್ತಾರೆ. ಒ.ಎಸ್ ನಂ. 183/2001 ದಾವೆಯು ದಿನಾಂಕ 07-02-2004 ರಲ್ಲಿ ವಜಾಗೊಂಡಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೇಲ್ಮನವಿ ಸಲ್ಲಿಸಿರುವುದಾಗಿ ನುಡಿಯುತ್ತಾರೆ. ಒ.ಎಸ್

183/2001 ರಲ್ಲಿನ ಆಸ್ತಿಯ ಸಂಖ್ಯೆ 2247(ಹೊಸ ನಂ.842/785) ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಆಸ್ತಿ ಮೃತ್ಯು ಪತ್ರದ ಮುಖಾಂತರ ತನಗೆ ಬಂದಿರುವುದಾಗಿ ನುಡಿಯುತ್ತಾರೆ. ನಾವು ಸಲ್ಲಿಸಿದ ಮೇಲ್ಮನವಿ ಸಂಖ್ಯೆ 46/2004 ಪುರಸ್ಕೃತಗೊಂಡು ಪುನಃ ಪ್ರಕರಣವನ್ನು ನಡೆಸುವಂತೆ ಆದೇಶ ಆಗಿದೆ ಎಂದರೆ ಸರಿ. ಮತ್ತೊಮ್ಮೆ ವಿಚಾರಣೆಗೆ ಒಳಪಟ್ಟು ಸದರಿ ದಾವೆ ದಿನಾಂಕ 19-02-2009 ರಂದು ಪರಿಪೂರ್ಣವಾಗಿ ವಜಾಗೊಂಡಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿರುವುದಾಗಿ ನುಡಿಯುತ್ತಾರೆ. ಮೇಲ್ಮನವಿಯನ್ನು ಚಿಕ್ಕಬಳ್ಳಾಪುರ ನ್ಯಾಯಾಲಯದಲ್ಲಿ ಸಲ್ಲಿಸಿದ್ದು ಅದರ ಸಂಖ್ಯೆ ನೆನಪಿಲ್ಲ. ಸದರಿ ಮೇಲ್ಮನವಿ ಪ್ರಕರಣದ ಆದೇಶ ಪುಟವನ್ನು ಹಾಜರುಪಡಿಸಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು